# CMR CELEBRATES 30TH FOUNDERS DAY ON 19TH NOVEMBER 2021

**Publication: Vijaya Karnataka**
**Date 20-11-21 Page 11**

## ಸಿಎಂಆರ್ ಶಿಕ್ಷಣ ಸಂಸ್ಥೆ ಸಂಸ್ಥಾಪಕರ ದಿನಾಚರಣೆ



**ಬೆಂಗಳೂರು:** ಸಿಎಂಆರ್ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಶುಕ್ರವಾರ ಸಂಸ್ಥಾಪಕರ ದಿನವನ್ನು ಆಚರಿಸಲಾಯಿತು. ಸಂಸ್ಥಾಪಕರ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ನಿರ್ಮಿಸಲಾದ ನೂತನ ಕ್ಯಾಂಟೀನ್ ಉದ್ಘಾಟನೆ, ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ನಿರ್ಮಿಸಲಾಗುತ್ತಿರುವ ವಸತಿ ಗೃಹಗಳ ಕಟ್ಟಡದ ಭೂಮಿ ಪೂಜೆ ಹಾಗೂ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ ಸೇವಾ ಪ್ರಶಸ್ತಿಯನ್ನೂ ನೀಡಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಸಚಿವ ಅರವಿಂದ ಲಿಂಬಾವಳಿ, ''ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಷ್ಟೆ ಅಲ್ಲದೇ, ದೇಶ-ವಿದೇಶಗಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿದ್ದು ಅತ್ಯುತ್ತಮವಾದ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ,'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರಾಜ್ಯಸಭಾ ಸದಸ್ಯ ಮತ್ತು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ಕುಲಪತಿ ಡಾ. ಸಬಿತಾ ರಾಮಮೂರ್ತಿ, ಕುಲಸಚಿವ ಡಾ. ಆರ್.ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ 5ರಿಂದ 25 ವರ್ಷಗಳ ಸೇವೆ ಸಲ್ಲಿಸಿದ 265 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ನೆನಪಿನ ಫಲಕ ಹಾಗೂ ಪ್ರಮಾಣ ಪತ್ರ ನೀಡಿ ಪುರಸ್ಕರಿಸಲಾಯಿತು.

**Publication: Prajavani**
**Date 20-11-21 Page 03**

# ಸಿಎಂಆರ್: ಸಂಸ್ಥಾಪಕರ ದಿನಾಚರಣೆ



ಶಾಸಕ ಅರವಿಂದ ಲಿಂಬಾವಳಿ ಹಾಗೂ ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಅವರು ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯದ ಭೂಮಿ ಪೂಜೆ ನೆರವೇರಿಸಿದರು

ಬೆಂಗಳೂರು: 'ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. ದೇಶ, ವಿದೇಶದ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ವೇದಿಕೆ ಕಲ್ಪಿಸಿದೆ' ಎಂದು ಶಾಸಕ ಅರವಿಂದ ಲಿಂಬಾವಳಿ ತಿಳಿಸಿದರು.

ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯ-ಕ್ರಮದಲ್ಲಿ ವಿದ್ಯಾರ್ಥಿಗಳಿಗಾಗಿ ನಿರ್ಮಿ-ಸಲಾಗಿರುವ ಕ್ಯಾಂಟೀನ್ ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯಕ್ಕೆ ಭೂಮಿ ಪೂಜೆ ಕೂಡ ಮಾಡಲಾಯಿತು. ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದ 265 ಸಿಬ್ಬಂದಿಗೆ ಕಾರ್ಯಕ್ರಮದಲ್ಲಿ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಜ್ಯಸಭಾ ಸದಸ್ಯ ಹಾಗೂ ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, 'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೊಳಿಸಲು ಶಿಕ್ಷಣ ಸಂಸ್ಥೆ ಬದ್ಧವಾಗಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ಕೌಶಲಯುಕ್ತ ಶಿಕ್ಷಣ ನೀಡಲಾಗುತ್ತದೆ. ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ಸುರಕ್ಷತೆ ಹಾಗೂ ಹಿತಾಸಕ್ತಿ ರಕ್ಷಿಸಲೂ ಸಂಸ್ಥೆ ಒತ್ತು ನೀಡಲಿದೆ' ಎಂದು ಹೇಳಿದರು.

**Publication: Andhra Jyoti**
**Date 20-11-21 Page 03**

# ఘనంగా సీఎంఆర్ సంస్థాపనా దినోత్సవం

**బెంగళూరు, నవంబరు 19 (ఆంధ్రజ్యోతి):** నగరంలోని సీఎంఆర్ గ్రూప్ విద్యా సంస్థల సంస్థాపనా దినోత్సవం శుక్రవారం యూనివర్సిటీ క్యాంపస్‌లో ఏర్పాటైంది. ఈ కార్యక్రమాలను మాజీ మంత్రి, స్థానిక ఎమ్మెల్యే అరవింద లింబావళి జ్యోతి ప్ర జ్వలనతో లాంఛనంగా ఆరంభించారు. ఇదే సందర్భంగా విద్యార్థుల కోసం ఏర్పాటు చేసిన నూతన క్యాంటీన్‌ను ఆరంభించడంతో పాటు సిబ్బంది కోసం నిర్మించతల పెట్టిన వసతి సముదాయానికి శంఖుస్థాపన చేశారు. అనంతరం ఆయన ప్రసంగి స్తూ ఉన్నత విద్యారంగంలో సీఎంఆర్ గ్రూప్ అందిస్తున్న సేవలు ప్రశంసనీయమ న్నారు. రాజ్యసభ సభ్యుడు, సీఎంఆర్ గ్రూప్ విద్యాసంస్థల ఛైర్మన్ కేసీ రామమూర్తి మాట్లాడుతూ సంస్థ ఇంతవరకు సాధించిన ప్రగతిని వివరించారు. నాణ్యతా ప్రమాణాలు, క్రమశిక్షణకు పెద్దపీట వేస్తున్నామన్నారు. యూనివర్సిటీ ఛాన్సులర్ డాక్టర్ స వితా రామమూర్తి తదితరులు కార్యక్రమంలో పాల్గొన్నారు,



నూతన క్యాంటీన్‌ను ఆరంభిస్తున్న మాజీ మంత్రి అరవింద లింబావళి

**Publication: Kannada prabha**
**Date 20-11-21 Page 03**

# ದೇಶ-ವಿದೇಶದ ವಿದ್ಯಾರ್ಥಿಗಳಿಗೆ ಸಿಎಂಆರ್ ಗುಣಮಟ್ಟದ ಶಿಕ್ಷಣ: ಅರವಿಂದ ಲಿಂಬಾವಳಿ

## ಸಿಎಂಆರ್ ವಿವಿ ಸಂಸ್ಥಾಪಕರ ದಿನಾಚರಣೆಯಲ್ಲಿ ಮಾಜಿ ಸಚಿವ ಅಭಿಮತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಸಿಎಂಆರ್ ವಿಶ್ವವಿದ್ಯಾಲಯ ಭಾರತೀಯ ವಿದ್ಯಾರ್ಥಿಗಳು ಮಾತ್ರವಲ್ಲದೇ ವಿಶ್ವದ ವಿವಿಧ ದೇಶಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

ನಗರದ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಂಸ್ಥಾಪಕರ ದಿನಾಚರಣೆ ಮತ್ತು ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಿರುವ ಕ್ಯಾಂಟೀನ್ ಹಾಗೂ ಸಿಬ್ಬಂದಿಗೆ ನಿರ್ಮಿಸುತ್ತಿರುವ ವಸತಿ ಗೃಹಗಳ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಬೆಂಗಳೂರಿನಲ್ಲಿ ಹಲವು ವಿಶ್ವವಿದ್ಯಾಲಯಗಳು ವಿಶ್ವಮಟ್ಟದಲ್ಲಿ ಉತ್ತಮ ಹೆಸರನ್ನು ಪಡೆದಿವೆ. ಅವುಗಳ ಸಾಲಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ಸ್ಥಾನ ಗಳಿಸಿದೆ. ಅಲ್ಲದೆ, ವಿದೇಶಿ ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ನಿರ್ಮಿಸುತ್ತಿದೆ ಎಂದು ಹೇಳಿದರು. ಸಮಾರಂಭದಲ್ಲಿ ರಾಜ್ಯಸಭಾ ಸದಸ್ಯ ಸಿ.ಕೆ.ರಾಮಮೂರ್ತಿ, ವಿವಿಯ ಕುಲಾಧಿಪತಿಗಳಾದ ಡಾ.ಸಬಿತಾ ರಾಮಮೂರ್ತಿ, ಸಹ ಕುಲಾಧಿಪತಿ ಕೆ.ಆರ್.ಜಯದೀಪ್, ಉಪಕುಲಪತಿ ಡಾ.ತ್ರಿಸ್ಥಾ ರಾಮಮೂರ್ತಿ, ಹಣಕಾಸು ಮತ್ತು ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕಿ ಶ್ರೇಯಾ ರೆಡ್ಡಿ ಮತ್ತಿತರರಿದ್ದರು.



**ಸಿಎಂಆರ್ ವಿವಿ ಶುಕ್ರವಾರ ಹಮ್ಮಿಕೊಂಡಿದ್ದ ಸಂಸ್ಥಾಪಕರ ದಿನಾಚರಣೆ ಮತ್ತು ಸಿಬ್ಬಂದಿಗಾಗಿ ನಿರ್ಮಿಸುತ್ತಿರುವ ವಸತಿ ಗೃಹಗಳ ಶಂಕುಸ್ಥಾಪನೆಯನ್ನು ಅರವಿಂದ ಲಿಂಬಾವಳಿ ನೆರವೇರಿಸಿದರು.**

**Publication: Indian Express**
**Date 22-11-21 Page 01**

## CITY READ

## City-based university celebrates Founder's Day



CMR University and CMR Group of Institutions celebrated Founder's Day recently on their campus in Bagalur. Remembering the founders, Chikka Muniyappa Reddy and Ashwathamma Chikka Muniyappa Reddy, the occasion also witnessed the inauguration of the cafeteria at the main campus along with a bhoomi puja at the staff housing block. The event was attended by Arvind Limbavali, MLA of Mahadevapura constituency, KC Ramamurthy, IPS, who handed over plaques and certificates to 265 employees who were honoured on the occassion.

**Publication: The Hindu**
**Date 23-11-21 Page 03**

# CMR Group celebrates Founders' Day

STAFF REPORTER
BENGALURU

CMR University and CMR Group of Institutions recently celebrated its Founders' Day on its main campus in Bagalur in the city.

Chief Guest Aravind Limbavalli along with the management of the CMR Group of Institutions declared the Cafeteria Block open, and performed the bhoomi pooja for the Staff Housing Block.

During the event, employees having contributed 25 years, 20 years, 15 years, 10 years, and 5 years of exemplary service to the CMR Group of Institutions were given plaques and certificates. In all, a total of 265 employees received the honour from the distinguished guests, CMR Group of Institutions said in a release.

Speaking on the occasion, Mr. Limbavali stressed the need for the creation of an atmosphere conducive to the growth of Higher education in the State of Karnataka and emphasised that committed educational institutions such as the CMR Group need to be provided as much support from the outside as possible and expressed his intent to assist the CMR Group of Institutions in their future endeavours, the release stated.

Mr. Ramamurthy acknowledged the contribution of both the teaching and non-teaching staff at the CMR Group of Institutions and detailed how the Group was committed to protecting employees' interests. He also stressed on the importance of enriching educational experiences for students through NEP 2020 and about CMR University having a dedicated Curriculum Development Team.